## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 451/2024

ಸಾಕ್ಷಿಗೆ ದಿನಾಂಕ 06-03-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 4 P.W.: 4

| | | |
|---|---|---|
| ಹೆಸರು | ಃ | ಕುಂಬಾರ ರವಿಕುಮಾರ್ |
| ತಂದೆಯ ಹೆಸರು | ಃ | ಮಹಾಲಿಂಗಪ್ಪ |
| ವಯಸ್ಸು | ಃ | 47 ವರ್ಷ |
| ಉದ್ಯೋಗ | ಃ | ಹೆಚ್ ಸಿ |
| ವಾಸ ಸ್ಥಳ | ಃ | ಕೂಡ್ಲಿಗಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 21-06-2022 ರಿಂದ ನಾನು ಕೂಡ್ಲಿಗಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 06-03-2024 ರಂದು ಅದೇ ಗ್ರಾಮದಲ್ಲಿ ಒಂದು ಮಟಕಾ ಪ್ರಕರಣದಲ್ಲಿ ಆರೋಪಿಯನ್ನು ಬಂಧಿಸಿ ಠಾಣೆಗೆ ಕಳುಹಿಸಿದ ನಂತರ ಸಂಜೆ 6.55 ಗಂಟೆ ಸಮಯದಲ್ಲಿ ಅದೇ ಗ್ರಾಮದ ಅಂಗಡಿ ನಾಗರಾಜ ಅಂದರೆ ಆರೋಪಿತನು ತನ್ನ ಬೀಡಿ ಅಂಗಡಿಯ ಮುಂದುಗಡೆ ಮಟಕಾ ಚೀಟಿ ಬರೆಯುತ್ತಿದ್ದಾನಂತಾ ಮಾಹಿತಿ ಬಂದಿರುತ್ತದೆ. ಇನ್ನೊಂದು ಪ್ರಕರಣದಲ್ಲಿ ಭಾಗವಹಿಸಿದ ಪಂಚರಾದ ಚಾಸಾ-2 ಮತ್ತು 3 ರವರಿಗೆ ಸದರಿ ಬಾತ್ಮಿಯ ವಿಚಾರ ತಿಳಿಸಿ ಚಾಸಾ-5, 6, ನಾನು ಮತ್ತು ಚಾಸಾ-1 ರವರು ಸೇರಿ ಆರೋಪಿತನ ಅಂಗಡಿಯ ಮೇಲೆ ದಾಳಿ ಮಾಡಿರುತ್ತೇವೆ. ಅಲ್ಲಿ ಆರೋಪಿತನು ಮಟಕಾ ಚೀಟಿ ಬರೆಸಿ ನಂಬರ್ ಬಂದಲ್ಲಿ ರೂ.1/- ಕ್ಕೆ ರೂ.80/- ಕೊಡುವುದಾಗಿ ಹೇಳುತ್ತಾ ಸಾರ್ವಜನಿಕರಿಂದ ಹಣ ಪಡೆದು ಮಟಕಾ ಚೀಟಿ ಬರೆಯುತ್ತಿದ್ದನ್ನು ಅಂಗಡಿಯ ಮುಂದಿದ್ದ ಸಾರ್ವಜನಿಕರು ನಮ್ಮನ್ನು ನೋಡಿ ಓಡಿಹೋಗಿರುತ್ತಾರೆ. ಆರೋಪಿಯನ್ನು ಹಿಡಿದುಕೊಂಡಿರುತ್ತೇವೆ ಮತ್ತು ಅವನ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ಆತನ ಹೆಸರು ಅಂಗಡಿ ನಾಗರಾಜ ಬಿನ್ ಈರಣ್ಣ ಅಂತಾ ತಿಳಿಸಿದನು. ಆರೋಪಿತನ ಅಂಗಶೋಧನೆಯನ್ನು ನಡೆಸಲಾಗಿ ಅವನ ಬಳಿಯಿಂದ ಒಂದು ಮಟಕಾ ಪಟ್ಟಿ, ಪೆನ್ನು ಮತ್ತು ನಗದು ರೂ.1670/-ನ್ನು ಅಮಾನತ್ತುಪಡಿಸಿಕೊಳ್ಳಲಾಯಿತು. ಸದರಿ ಅಮಾನತ್ತು ಪಂಚನಾಮೆಯನ್ನು ಸಂಜೆ 7 ರಿಂದ 7.45 ಗಂಟೆವರೆಗೆ ಜರುಗಿಸಲಾಯಿತು. ನಾನು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿದ್ದೇನೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆರೋಪಿ ನ್ಯಾಯಾಲಯದ ಮುಂದೆ ಇರುತ್ತಾರೆ. ನಾನು ಮು ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ ಈಗಾಗಲೇ ಮು ಮಾ-1 ರಿಂದ 3 ಎಂದು ಗುರುತಿಸಲಾಗಿದೆ.

ಪಾಟೀ ಸವಾಲು. ಆರೋಪಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಈ ಪ್ರಕರಣದಲ್ಲಿ ಚಾಸಾ-1 ನಮ್ಮ ಹಿರಿಯ ಅಧಿಕಾರಿ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ಚಾಸಾ-1 ರವರು ನೀಡಿರುವಂತಹ ನಿರ್ದೇಶನವನ್ನು ನಾನು ಪಾಲಿಸುತ್ತೇನೆಂದರೆ ಸರಿ. ಹೊಸಕೇರಿ ಗ್ರಾಮಕ್ಕೆ ಹೋಗಲು 2 ದಾರಿ ಇವೆ ನಾವು ಶಿವಪುರ ಮಾರ್ಗವಾಗಿ ಹೊಸಕೇರಿ ಗ್ರಾಮಕ್ಕೆ ಹೋಗಿರುತ್ತೇವೆ. ಹೊಸಕೇರಿ ಗ್ರಾಮ ದೊಡ್ಡ ಗ್ರಾಮವಾಗಿರುತ್ತದೆ. ಈ ಪ್ರಕರಣದ ಕೃತ್ಯಸ್ಥಳಕ್ಕೂ ಮತ್ತು ಆ ದಿನ ದಾಳಿ ಮಾಡಿದ ಇನ್ನೊಂದು ಪ್ರಕರಣದ ಕೃತ್ಯಸ್ಥಳಕ್ಕೂ ಸುಮಾರು 500 ಮೀ ಅಂತರ ಇದೆ. ಆ ಕಾರಣದಿಂದಾಗಿ ಸದರಿ ಸ್ಥಳದಿಂದ ಈ ಪ್ರಕರಣದ ಕೃತ್ಯಸ್ಥಳ ನೇರವಾಗಿ ಕಾಣುತ್ತದೆಂದರೆ ಸರಿಯಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಸಂಜೆ ಸಮಯದಲ್ಲಿ ಸಾರ್ವಜನಿಕರು ಆ ಹಳ್ಳಿಯಲ್ಲಿರುವ ಅಂಗಡಿಗಳು ಅಥವಾ ಆ ಹಳ್ಳಿಯಲ್ಲಿರುವಂತಹ ಸರ್ಕಲ್ ನಲ್ಲಿ ಸೇರುತ್ತಾರೆಂದರೆ ಸರಿ. ಪೋಲೀಸ್ ಇಲಾಖೆಯ ಸಿಬ್ಬಂದಿಗಳು ಮತ್ತು ಪೋಲೀಸ್ ಜೀಪ್ ಹಳ್ಳಿಗಳಲ್ಲಿ ಬಂದಾಗ ಹಳ್ಳಿಯ ಜನರು ಅಲ್ಲಿ ಜಮಾಯಿಸುತ್ತಾರೆಂದರೆ ಸರಿಯಲ್ಲ. ಆ ದಿನ ಅದೇ ಗ್ರಾಮದಲ್ಲಿ ಸುಮಾರು 500 ಮೀ ಅಂತರದಲ್ಲಿ ಒಬ್ಬ ಆರೋಪಿಯನ್ನು ಮಟಕಾ ಪ್ರಕರಣದಲ್ಲಿ ಬಂಧಿಸಿರುತ್ತೇವಂತಾ ಹೇಳಿದ್ದು ಅದೇ ದಿನ ಸ್ವಲ್ಪ ಸಮಯದ ಅಂತರದಲ್ಲಿ ಇನ್ನೊಂದು ವ್ಯಕ್ತಿ ಆ ರೀತಿ ಮಟಕಾ ದಂಧೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇರುವುದಿಲ್ಲವೆಂದರೆ ಸರಿಯಲ್ಲ. ನಾವು ಯಾವುದೇ ರೀತಿಯಿಂದ ದಾಳಿ ಮಾಡಿಲ್ಲ, ಆರೋಪಿಯಿಂದ ಯಾವುದೇ ಮು ಮಾಲುಗಳನ್ನು ಅಮಾನತುಪಡಿಸಿಕೊಂಡಿಲ್ಲ, ಆರೋಪಿ ಯಾವುದೇ ತಪ್ಪು ಮಾಡಿಲ್ಲ ಆರೋಪಿಗೂ ಮು ಮಾಲಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖ್ಯೆ ಸಲುವಾಗಿ ಮು ಮಾಲುಗಳನ್ನು ಸೃಷ್ಟಿಸಿಕೊಂಡು ಆರೊಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ